# ಶ್ರೀ ಎಸ್. ಡಿ. ಇಂಚಲರ 'ಕಾವ್ಯಪ್ರೇಮ'

**ದೀಪಾ ಅಂಗಡಿ ಬ.**
ಸಂಶೋಧನಾ ವಿದ್ಯಾರ್ಥಿನಿ
ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
deepa.angadi59@gmail.com

**Article Link: https://aksharasurya.com/2023/05/deepa-angadi-ba/**

**ತಿರುಳು:**

'ಬಸವತನಯ' ಎಂಬ ಕಾವ್ಯನಾಮದಿಂದ ಸಾಹಿತ್ಯವನ್ನು ಸೃಷ್ಟಿಸಿ, ಕನ್ನಡ ತಾಯಿ ಭುವನೇಶ್ವರಿಗೆ ಅರ್ಪಿಸಿದ ನವೋದಯ ಕವಿ ಶ್ರೀ ಎಸ್. ಡಿ. ಇಂಚಲರು. ಯಾವುದೇ ಸ್ವಾರ್ಥವಿಲ್ಲದೇ ಕನ್ನಡ ಸೇವೆಯನ್ನು ತಮ್ಮ ಕೊನೆಯುಸಿರಿರುವರೆಗೂ ಪ್ರಯತ್ನಿಸಿದ ಮಹನೀಯರಲ್ಲಿ ಮಹನೀಯರಾದವರು. ಕನ್ನಡದ ನೋವು–ನಲಿವಿಗೆ ಸ್ಪಂದಿಸಿದ್ದು, 'ನಾಡಿಗಾಗಿ ನಡಿ, ನಾಡಿಗಾಗಿ ದುಡಿ, ನಾಡಿಗಾಗಿ ಮಡಿ' ಎಂದು ತಮ್ಮ ಗಟ್ಟಿ ನುಡಿಗಳಿಂದ ಸ್ಫೂರ್ತಿ ತುಂಬುತ್ತಾ ಬೆಳಗಾವಿ ಮತ್ತು ಅದರ ಸುತ್ತಲಿನ ಪರಿಸರದಲ್ಲಿ ಕನ್ನಡದ ವಾತಾವರಣವನ್ನು ನಿರ್ಮಿಸುವಲ್ಲಿ ಮಹತ್ತರವಾದ ಸೇವೆ ಸಲ್ಲಿಸಿದ ಕೀರ್ತಿ ಎಸ್. ಡಿ. ಇಂಚಲರಿಗೆ ಸಲ್ಲುತ್ತದೆ. ಪ್ರಕೃತಿಯ ಆರಾಧನೆ, ನಿಸರ್ಗದ ಸೌಂದರ್ಯ, ಪ್ರೀತಿ, ಮಮತೆ, ಗೌರವಗಳನ್ನು ತೋರಿಸುತ್ತಾ ಎಲ್ಲರ ಮನದಲ್ಲಿಯೂ ವಿಶ್ವಾಸವನ್ನು ಗಟ್ಟಿಗೊಳಿಸಿದ ಅಪರೂಪದ ಕವಿ. ಕಾವ್ಯಗಳಲ್ಲಿರುವ ರಸಪೂರ್ಣತೆ, ಸಾಮಾಜಿಕ ಚಿಂತನೆ, ಮಕ್ಕಳ ಕವಿತೆಗಳು, ಕನ್ನಡ ನಾಡು–ನುಡಿಯ ಪ್ರೇಮ, ವ್ಯಕ್ತಿಚಿತ್ರಣಗಳ ಕುರಿತ ಕಾವ್ಯಗಳು, ಸ್ನೇಹದ ಕುರಿತಾದ ಕವಿತೆಗಳು ಈ ಎಲ್ಲ ಅಂಶಗಳನ್ನು ಪರಿಪರಿಯಾಗಿ ನೋಡಿದಾಗ ಎಸ್. ಡಿ. ಇಂಚಲರ ಮನದಾಳದ ಮೂಲಕ ಅವರ ದೇಶಪ್ರೇಮ, ಭಾಷಾಪ್ರೇಮ ಹಾಗೂ ವಿದ್ಯಾರ್ಥಿಗಳ ಮೇಲಿರುವ ಪ್ರೀತಿ, ಸ್ನೇಹಿತರ ಬಳಗ, ಸಾಮಾಜಿಕ ಚಿಂತನೆಗಳು ಹೇಗೆ ಎದ್ದು ಕಾಣುತ್ತವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಆದ್ದರಿಂದ ಎಸ್. ಡಿ. ಇಂಚಲರ ಕಾವ್ಯಗಳಲ್ಲಿ 'ರಸಜ್ಞ'ವನ್ನು ಕಾಣುವ ಮೂಲಕ ಅವರ ಸಾಹಿತ್ಯದ ಅಭಿರುಚಿಯನ್ನು ಎಲ್ಲರಿಗೂ ಉಣಬಡಿಸುತ್ತಾ, ಈ ಲೇಖನದ ಮುಖ್ಯ ಉದ್ದೇಶ ಎಸ್.ಡಿ. ಇಂಚಲರ ಕಾವ್ಯಪ್ರೇಮ ಹೇಗೆ ಸಾಮಾಜಕ್ಕೂ ಮತ್ತು ಓದುಗರಿಗೂ ರಸದೌತಣವನ್ನು ನೀಡುತ್ತದೆ ಎಂಬುದನ್ನು ಇಲ್ಲಿ ವಿವರಿಸುವ

ಪ್ರಯತ್ನ ಮಾಡಲಾಗಿದೆ.

**ಬದುಕು–ಬರಹ:**

ಶಿಸ್ತು ಮತ್ತು ಪ್ರಾಮಾಣಿಕತೆಗೆ ಇನ್ನೊಂದು ಹೆಸರೇ ಎಸ್. ಡಿ. ಇಂಚಲರು. ನವೋದಯದ ಉತ್ಕರ್ಷ ಕಾಲದಲ್ಲಿ ಬೆಳಗಾವಿ ಪರಿಸರದಲ್ಲಿ ಸಾಹಿತಿಕವಾಗಿ ಹೊಸ ಬೆಳಕನ್ನುಂಟು ಮಾಡಿದ ಅಪರೂಪದ ಕವಿ. ಬೆಳಗಾವಿಯಲ್ಲಿ ಕನ್ನಡದ ವಾತಾವರಣವನ್ನು ತಿಳಿಗೊಳಿಸುತ್ತಾ ಭಾಷಾ ಪ್ರೇಮವನ್ನು ಎಲ್ಲರಲ್ಲಿಯೂ ಬೆಳಗಿಸಿದವರು. ಎಸ್. ಡಿ. ಇಂಚಲರು ಎಪ್ರೀಲ್ 1, 1913 ರಂದು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಶ್ರೀ ಶಿವಪುತ್ರಪ್ಪ ದೇಮಪ್ಪ ಇಂಚಲ. ತಂದೆ ದೇಮಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. ತಾಯಿ ಬಸವಂತವ್ವ. ಇಂಚಲರ ವಿದ್ಯಾಭ್ಯಾಸಕ್ಕೆ ಹೆಜ್ಜೆಯಿಡಿಸುವುದರ ಮೂಲಕ ತಾಯಿಯೇ ಮೂಲ ಗುರುವಾದರು. ಇಂಚಲರ ಪ್ರಾಥಮಿಕ ವಿದ್ಯಾಭ್ಯಾಸವೆಲ್ಲವೂ ಹಿರೇಬಾಗೇವಾಡಿಯಲ್ಲಿಯೇ ಮುಗಿಸಿದರು. ಮುಂದೆ ಜಿ.ಎ. ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸು ಮಾಡಿಕೊಂಡು ಕೊಲ್ಹಾಪೂರದ ರಾಜಾರಾಮ್ ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಉನ್ನತ ಶಿಕ್ಷಣವನ್ನು ಪೂರೈಸಿದರು. 1938ರಲ್ಲಿ ಬಿ.ಎ. ಪದವಿಯನ್ನು ಲಿಂಗರಾಜ ಕಾಲೇಜಿನಲ್ಲಿ ಮುಗಿಸಿ ಪ್ರಪ್ರಥಮ ಪದವೀಧರರು ಎಂಬ ಕೀರ್ತಿಗೆ ಪಾತ್ರರಾದರು. ಅಲ್ಲಿದ್ದ ಪ್ರೊ. ಶಿ.ಶಿ. ಬಸವನಾಳರು, ಪ್ರೊ. ಬಾಗಿ, ಪ್ರೊ. ವ್ಹಿ.ಜಿ. ಕುಲಕರ್ಣಿ, ಪ್ರೊ. ಶ್ರೀನಿವಾಸ ಅಯ್ಯಂಗಾರ್‌ರಂಥ ಶ್ರೇಷ್ಠ ಪ್ರಾಧ್ಯಾಪಕರು ಇವರಿಗೆ ಸಿಕ್ಕಿದರು. ಬಸವನಾಳರ ಕನ್ನಡ ಪ್ರೇಮ, ಪಾಂಡಿತ್ಯ, ವಿಮರ್ಶನ ನೈಪುಣ್ಯ, ಸ್ವಚ್ಛತೆ, ಶಿಸ್ತುಗಳನ್ನು ಇಂಚಲರು ರೂಢಿಸಿಕೊಂಡು ಬೆಳೆದರು.

'ಬೆಳೆವ ಸಿರಿ ಮೊಳಕೆಯಲ್ಲಿ' ಎಂಬಂತೆ ಇವರಲ್ಲಿ ಕಾವ್ಯಾಸಕ್ತಿ ಹುಟ್ಟಿದ್ದೇ ಪ್ರಾಥಮಿಕ ಶಾಲಾಹಂತದಲ್ಲಿ. ಸಂಕ್ರಾಂತಿ, ತಾಯಿ, ಕರ್ನಾಟಕಗೀತೆ, ಕಿತ್ತೂರ ಮೊದಲಾದ ಕವನಗಳು ಕಾಲೇಜಿನ ಮ್ಯಾಗಜಿನ್ 'ರಾಜಾರಾಮಿಯನ್'ನಲ್ಲಿ ಪ್ರಕಟವಾಗಿ ಇಂಚಲರಿಗೆ ಒಳ್ಳೆಯ ಹೆಸರುಗಳಿಸಿ ಕೊಟ್ಟವು. ಕೊಲ್ಲಾಪೂರದಲ್ಲಿ ಟಿ. ಸಿ. ಇಟಗಿಯವರೊಡನೆ ಸ್ನೇಹ ಬೆಳೆದು ಅವರು ಹಲವಾರು ರೀತಿಯಲ್ಲಿ ಇಂಚಲರಿಗೆ ನೆರವಾಗಿದ್ದನ್ನು ಅವರು ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾರೆ. ಸಹಾಯಕ ಶಿಕ್ಷಣಾಧಿಕಾರಿಯಾಗಿ, ಬೆಳಗಾವಿಯ ಮತ್ತು ಹುಬ್ಬಳ್ಳಿಯ ಕೆ.ಪಿ.ಟಿ. ಕಾಲೇಜುಗಳಲ್ಲಿ ಮುಖ್ಯೋಧ್ಯಾಪಕರಾಗಿ ಕೊನೆಗೆ 1957 ರಿಂದ ಗಿಲಗಿಂಚಿ ಅರಟಾಳ

ಹೈಸ್ಕೂಲಿನ ಮುಖ್ಯೋಧ್ಯಾಪಕರಾಗಿ 01/04/1974ರಲ್ಲಿ ನಿವೃತ್ತಿ ಹೊಂದಿದರು. ನಂತರ ಇವರು ಅಸ್ತಮಾದಿಂದ ಬಳಲುತ್ತಿದ್ದ ಕಾರಣ ಅನಿರೀಕ್ಷಿತವಾಗಿ ಎಪ್ರೀಲ್ 7, 1974ರಂದು ನಿಧನರಾದರು. ಇದರಿಂದಾಗಿ ಸಮಾಜಕ್ಕೆ, ವಿಶೇಷವಾಗಿ ಬೆಳಗಾವಿಯ ಕನ್ನಡ ಜನತೆಗೆ ತುಂಬಲಾರದ ಹಾನಿಯುಂಟಾಯಿತು. ಇಂಚಲರು ಸಾಹಿತಿಯಾಗಿ ತಾವಷ್ಟೇ ಬೆಳೆಯದೆ, ತಮ್ಮ ಜೊತೆಗೆ ಕಿರಿಯರನ್ನು ಪ್ರೋತ್ಸಾಹಿಸಿ, ಸ್ನೇಹಬಳಗವನ್ನು ಕಟ್ಟಿ ಬೆಳೆಸಿದವರು. ಬೆಳಗಾವಿಯಲ್ಲಿ ಅವರು ಗಿಲಗಿಂಚಿ ಅರಟಾಳ ಹೈಸ್ಕೂಲಿನ ಮುಖ್ಯೋಧ್ಯಾಪಕರಾಗಿದ್ದುದು ಬೆಳಗಾವಿಯ ಕನ್ನಡಿಗರ ಭಾಗ್ಯವಾಗುವಂತೆ ಅವರು ಮಾಡಿದ ಕಾರ್ಯ ಸಂಸ್ಮರಣೀಯವಾಗಿದೆ. ಹಲವಾರು ಶಿಕ್ಷಕರಿಗೆ ಇವರು ಆದರ್ಶಮಯವಾಗಿದ್ದು, ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದ ಕೀರ್ತಿ ಇವರಿಗೆ ಸಲ್ಲುತ್ತದೆ.

ಎಸ್. ಡಿ. ಇಂಚಲರ ಕಾವ್ಯಗಳಲ್ಲಿ ಪ್ರೀತಿ, ಒಲವು, ಸ್ನೇಹ, ನಿಸರ್ಗ ಸೌಂದರ್ಯ, ಮಾನವೀಯತೆ ಎಂಬ ಮೊದಲಾದ ಅಂಶಗಳಲ್ಲಿ ಸಮನ್ವಯತೆಯನ್ನು ಕಾಣುತ್ತೇವೆ. ನಾಡು–ನುಡಿಗಳ ಮೇಲಿರುವ ಅಭಿಮಾನ, ಸೃಜನಶೀಲತೆ, ರಾಷ್ಟ್ರೀಯ ಭಾವೈಕ್ಯತೆ ಹಾಗೂ ಜೀವನದ ರಸಪೂರ್ಣತೆಯನ್ನು ಗುರುತಿಸುವಲ್ಲಿ ಈ ಲೇಖನ ಸಹಕಾರಿಯಾಗಿದೆ. ಇಂಚಲರ ಕಾವ್ಯರಚನೆಗೆ ಮೂಲ ಪ್ರೇರಣೆಯೆಂದರೆ ವರಕವಿ ಬೇಂದ್ರೆ, ರಸಋಷಿ ಕುವೆಂಪುರವರ ಪ್ರಭಾವದಿಂದಾಗಿ ಕಾವ್ಯಗಳನ್ನು ರಚಿಸಲು ಶುರು ಮಾಡಿದರು. ಇಂದು ಅವರ ಕಾವ್ಯಗಳ ಕೀರ್ತಿ ಎಲ್ಲರ ಮನಸೆಳೆಯುಂತಾಗಿದೆ.

ಎಸ್. ಡಿ. ಇಂಚಲರ ಕವನ ಸಂಕಲನಗಳೆಂದರೆ ತರಂಗಿಣಿ, ಸ್ನೇಹಸೌರಭ, ಡಿಂಡಿಮ, ಭಾವಶ್ರೀ, ಕಿತ್ತೂರ ಕ್ರಾಂತಿ, ಜಾನಪದ ಗೀತೆಗಳು, ಮಹಾಂತ ಮಹಿಮೆ. ಇವರು ಬರೆದ ಶಿಶುಗೀತೆಗಳ ಸಂಕಲನವೆಂದರೆ ಬಣ್ಣದ ಚಂಡು. ಕರ್ನಾಟಕ ದರ್ಶನ ಇವರ ಸಂಪಾದನೆ ಕೃತಿಯಾಗಿದೆ.

ಒಂದು ಕಡೆ ಡಾ. ಡಿ. ಎಸ್. ಕರ್ಕಿಯವರು ಇಂಚಲರ ಕುರಿತು ಹೀಗೆ ಹೇಳುತ್ತಾರೆ. 'ಸುಲಭ ಶೈಲಿಯ ದೃಷ್ಟಿಯಿಂದ, ಭಾವಾವೇಶದ ದೃಷ್ಟಿಯಿಂದ, ವಿಷಯ ವೈವಿಧ್ಯದ ದೃಷ್ಟಿಯಿಂದ, ನಾದ ಮಾಧುರ್ಯದ ದೃಷ್ಟಿಯಿಂದ ಇಂಚಲ ಅವರ ಕವನಗಳು ಮನೋರಾಗವನ್ನುಂಟು ಮಾಡತಕ್ಕಂಥವುಗಳಾಗಿವೆ. ಅವರೊಬ್ಬ ಸಹಜ ಕವಿ' ಎಂದು ಹೇಳಿದ್ದು ಅವರ ಸಹಜತೆಯನ್ನು ಕಾವ್ಯದ ಮೇಲಿನ ಅವರ ಪ್ರೇಮವನ್ನು ಕಾಣುತ್ತೇವೆ. ಆ ಕಾರಣದಿಂದಾಗಿ 'ಎಸ್. ಡಿ. ಇಂಚಲರ ಕಾವ್ಯಪ್ರೇಮ'ದ ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.

**ಕಾವ್ಯಗಳಲ್ಲಿ ರಸಪೂರ್ಣತೆ:**

ನವೋದಯ ಪಂಥದಲ್ಲಿ ಮುಖ್ಯವಾಗಿ ಕಂಡುಬರುವ ಸಂಗತಿಗಳೆಂದರೆ, ನಿಸರ್ಗ ಪ್ರೇಮ ಮತ್ತು ಆಧ್ಯಾತ್ಮಿಕತೆ. ಇದು ಕವಿಯ ಅಂತರಾತ್ಮವನ್ನು ಹೊರಯೆಳೆಯುವ ಕೆಲಸವನ್ನು ಮಾಡುತ್ತದೆ. ಒಂದೆಡೆ ಜಿ. ಎಸ್. ಶಿವರುದ್ರಪ್ಪನವರು ಬರೆದ 'ಸೌಂದರ್ಯ ಸಮೀಕ್ಷೆ' ಕೃತಿಯಲ್ಲಿ ಹೀಗೆ ವಿವರಿಸುತ್ತಾರೆ. 'ಕವಿ ಪ್ರಜ್ಞೆಯನ್ನು ಮೊದಲು ಆಕರ್ಷಿಸುವುದು ಪ್ರಕೃತಿ, ನಂತರ ತನ್ನ ವೈಭವಯುಕ್ತವೂ, ವೈವಿಧ್ಯಪೂರ್ಣವೂ ಆಗಿರುವುದು ಸೌಂದರ್ಯದಿಂದ' ಎಂದು ಹೇಳುತ್ತಾರೆ. ನವೋದಯದ ಶ್ರೇಷ್ಠ ಕವಿಗಳಾದ ಕುವೆಂಪು, ಬೇಂದ್ರೆ, ಪು.ತಿ.ನ ರಂತಹ ಹಲವಾರು ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರಕೃತಿಯ ಅನುಭೂತಿ, ಮನೋಭಾವನೆಗಳು ಮತ್ತು ವೈಚಾರಿಕತೆಯೊಂದಿಗೆ ಅಭಿವ್ಯಕ್ತಿಗೊಂಡಿರುವುದನ್ನು ನಾವು ಇಂದಿಗೂ ಕಾಣುತ್ತೇವೆ. ನಿಸರ್ಗವನ್ನು ಪ್ರೀತಿಸುವ ಗುರುಹಿರಿಯರನ್ನು ಗೌರವಿಸುವ ಗುಣಗಳಿಂದ ಕೂಡಿದ್ದ ವೀರಕವಿ, ನಿಸರ್ಗಕವಿ ಎಂದು ಪ್ರಖ್ಯಾತರಾಗಿದ್ದ ಎಸ್. ಡಿ. ಇಂಚಲರ ಸಾಹಿತ್ಯ ಕೃಷಿ ಅಪಾರವಾದದ್ದು.

ಎಸ್. ಡಿ. ಇಂಚಲರ ಪ್ರಥಮ ಕವನ ಸಂಕಲನ 'ತರಂಗಿಣಿ'ಯನ್ನು 1948ರಲ್ಲಿ ಪ್ರಕಟಿಸಿದರು. ಈ ಕವನಸಂಕಲನದಲ್ಲಿ ಪ್ರಕೃತಿಯ ಪ್ರೇಮವಸ್ತುವಾಗಿ ಮೂಡಿಬಂದಿದೆ. ನಿಸರ್ಗ ಸೌಂದರ್ಯದ ವರ್ಣನೆಯನ್ನು 'ಬೆಳಗು', 'ತರಂಗಿಣಿ', 'ವೈಜನಾಥ ಬೆಟ್ಟದ ಮೇಲೆ' ಮತ್ತು 'ಮಗುವಿನ ಹಂಬಲ' ಎಂಬ ಕವಿತೆಗಳಲ್ಲಿ ರಸವನ್ನು ಸವಿಯಬಹುದಾಗಿದೆ. ಇಂಚಲರ ಪ್ರಕೃತಿಯ ಆರಾಧನೆಯ ಬಗ್ಗೆ ಅರಿಯುವಾಗ ಅವರು ಬರೆದ 'ವೈಜ್ಯನಾಥ ಬೆಟ್ಟದ ಮೇಲೆ' ಎಂಬ ಒಂದು ಪದ್ಯದ ಸಾಲು ಹೀಗಿದೆ.

'ಖಗದ ಸಂಗೀತಕೆಂದು ಬಿದಿರ ಕೊರಳ ನುಡಿಸಿತು
ಮಲೆಯ ಹಸಿರ ಮೇಲೆ ಹಾಯ್ದು ತಂಪುಗಾಳಿ ಬೀಸಿತು
ಇಳೆಯ ಹೆಣ್ಣ ಹೆರಳಿಗೆಂದು ಹೂವುಗಳನ್ನು ಮುಡಿಸಿತು'

ಈ ಸಾಲುಗಳಲ್ಲಿ ಕವಿ ವೈಜ್ಯನಾಥ ಬೆಟ್ಟಕ್ಕೆ ಹೋದಾಗ ಅಲ್ಲಿಯ ನಿಸರ್ಗದ ಅಂದ-ಚಂದ, ಸುಂದರವಾಗಿ ಅರಳಿದ ಹೂವುಗಳು, ಬೆಟ್ಟ, ಗಿಡ, ಮರ, ಬಳ್ಳಿ, ಖಗ, ಮೃಗ, ಹರಿವನೀರು ಈ ಎಲ್ಲ ಸುಂದರ ಸನ್ನಿವೇಶದ ಲಕ್ಷಣಗಳು ಕವಿಯನ್ನು ಮೂಕವಿಸ್ಮಿತನನ್ನಾಗಿ ಮೂಡಿಸಿತು ಎಂದು ಹೇಳುತ್ತಾ ಬೆಳಗಾವಿಗೆ ಸಮೀಪವಾಗಿರುವ ವೈಜ್ಯನಾಥ ದೇವಾಲಯದಲ್ಲಿ ಶಿವಮೂರ್ತಿಯಿದ್ದು, ಇಲ್ಲಿ

ಗಿಡಮೂಲಿಕೆ, ವನಸ್ಪತಿ ಔಷಧಿಗಳು ಹೇರಳವಾಗಿ ದೊರೆಯುವುದರಿಂದ ಇದಕ್ಕೆ ವೈದ್ಯನಾಥ ಎಂದು ಹೆಸರು ಕೂಡ ಇದೆ ಎಂದು ಕವಿ ಇಲ್ಲಿ ಅತಿ ಸುಂದರವಾಗಿ ವಿವರಿಸಿದ್ದಾರೆ.

'ಸ್ನೇಹಸೌರಭ'ದಲ್ಲಿ 'ಮಂಜುಹನಿ', 'ಬಿಸಿಲುಮಳೆ' ನಿಸರ್ಗದಲ್ಲಿಯ ಚಿತ್ರ ವೈಚಿತ್ರಗಳನ್ನು ಕಂಡು ಆನಂದಗೊಂಡು ಅವುಗಳ ಸೌಂದರ್ಯವನ್ನು ಆಸ್ವಾದಿಸಿ ಆ ಸಂತೋಷದ ಅಲೆಗಳನ್ನು ತನ್ನ ಕವಿತೆಗಳಲ್ಲಿ ಸೆರೆಯಿಡಿದಿದ್ದಾರೆ.

'ತುಂಬಿದಾಗಸದಿಂದ
ಮುಗಿಲ ಹಿಂಡಿದ ತೆರದಿ
ಭೋರೆಂದು ಬಿಸಿಲು ಮಳೆ ಸುರಿಯುತ್ತಿತ್ತು'

'ಬಿಸಿಲಿದ್ದು ಮಳೆ ಬಂದು
ಹೊಸತೊಂದು ಸೊಗ ತಂದು
ಎಸೆವ ಭುವಿ ಬಾನುಗಳ ಬೆಳಗುತಿತ್ತು'

'ಬಿಸಿಲು ಮಳೆ' ಎಂಬ ಪದ್ಯಗಳಲ್ಲಿ ಬಿಸಿಲು ಮತ್ತು ಮಳೆ ಪ್ರಕೃತಿಯಲ್ಲಿ ಒಮ್ಮೆಲೇ ಘಟಿಸುವುದು ಅಪರೂಪ. ಆಕಾಶದಲ್ಲಿ ಮೂಡುವ ಕಾಮನಬಿಲ್ಲುಗಳು ಮಂಜಿನ ಹನಿಯ ರೂಪದಲ್ಲಿ ವಿಶ್ವರೂಪದ ಬಿಂಬವಾಗಿ ಪ್ರತಿಫಲಿಸಿದ ಸೌಂದರ್ಯವನ್ನು ಕಾಣುವುದರ ಜೊತೆಗೆ ಅದನ್ನು ಅನುಭವಿಸುವ ಶಕ್ತಿ ಕವಿಯ ದೃಷ್ಟಿಗಿದೆ ಎಂದು ಹೇಳುತ್ತಾ, ಅಂತಹ ಅಪರೂಪದ ಕವನ ಇದು ಎಂದು ಹೇಳುವಲ್ಲಿ ಕವಿಯ ಸೌಂದರ್ಯ ಪ್ರಜ್ಞೆಯನ್ನು ಅರಿಯಬಹುದು.

'ಎದೆಯಂಗಣದಲಿ ಮನದ ಮಯೂರಂ
ಹೊಂಬಯಕೆಯ ಗರಿ ಬಿಚ್ಚುತಿದೆ
ವಿಧಿ ಬರೆದಿಹ ಬಗೆಬಗೆಯ ರಂಗದಲಿ
ಕುಣಿಯುತ ಮೈಮನ ಮರೆಯುತಿದೆ'

'ಬಾಳಿನ ಬೇವೂ ಬೆಲ್ಲ ಮೆಲ್ಲುತ, ಜೀವನ ನೌಕೆಯ ನೂಕೋಣ
ತ್ಯಾಗವೇ ಜೀವನ ಸೇವೆಯೇ ಸಾಧನವೆನ್ನುತ ಹುಟ್ಟನು ಹಾಕೋಣ'

'ಯುಗಾದಿ'ಯ ಈ ಎರಡು ಕಾವ್ಯದಲ್ಲಿ ಇಂಚಲರು ನಿಸರ್ಗ ಮತ್ತು ಆಧ್ಯಾತ್ಮವನ್ನು ಬೆರಗುಗಣ್ಣಿನಿಂದ ನೋಡಿದ್ದು, ಅದರ ಸೌಂದರ್ಯ, ಆಕರ್ಷಣೆಗಳಲ್ಲಿ ತನ್ನಲ್ಲಿರುವ ದುಃಖ ದುಮ್ಮಾನಗಳನ್ನು ಮರೆಯುವಂತಹದ್ದು ನಿಜಕ್ಕೂ ಒಂದು

ಸುಂದರ ಕಲ್ಪನೆಯೇ ಸರಿ. ಬಡವ-ಶ್ರೀಮಂತನೆಂಬ ಭೇದ-ಭಾವ ತೋರದೆ ಪ್ರಕೃತಿಯ ಮೂಲಕ ಆಧ್ಯಾತ್ಮಿಕ ಅನುಭೂತಿಯನ್ನು ಸರಳ ಬದುಕಿನ ತತ್ವವೆಂಬತ್ತೆ ಸ್ವಂತಃ ತಾವೇ ಅರಿತು ಕಾವ್ಯ ವಾಚಕರಿಗೂ ರಸಜ್ಞವನ್ನು ಉಣಬಡಿಸಿದ್ದಾರೆ.

'ನಿನ್ನ ನಿಡುದೋಳಿನ ಪ್ರೇಮ ಪಂಜರದಲ್ಲಿ
ಅರಗಿಳಿಯು ನಾನಾಗಿ ಇರುವ ಆಶೆ
ನಿನ್ನ ತೊಡೆಯೇ ಎನ್ನ ತೊಟ್ಟಿಲಾಗಿರೆ ತಾಯಿ
ಹಾಲುಂಡ ಹಾಡುವೆನು ನಿನ್ನ ಭಾಷೆ'

'ತಾಯಿ ಮುದ್ದು' ಕವಿತೆಯಲ್ಲಿ ತಾಯಿ ಮತ್ತು ಮಗುವಿನ ಮಮತೆಯನ್ನು ವಿವರಿಸುತ್ತಾ, ಅಮ್ಮನ ಎದೆ ಹಾಲು ಅಮೃತಕ್ಕೆ ಸಮ. ಅದಕ್ಕೆ ಸಾಟಿ ಈ ಜಗತ್ತಿನಲ್ಲಿ ಬೇರೆ ಯಾವುದು ಇಲ್ಲ. ಅಂತೆಯೇ ಇಂಚಲರು ಅಮ್ಮನ ಕುರಿತು ಹೇಳುತ್ತಾ, ಮಕ್ಕಳ ಮನಸ್ಸು ಅರಿತುಕೊಂಡು ಬೋದಿಸಿದ್ದೆ ಆದರೆ ಅದು ಪರಿಣಾಮಕಾರಿಯಾಗುತ್ತೆ. ಅಂತಹ ಮಕ್ಕಳ ಮನೋವಿಜ್ಞಾನ ಅವರಿಗೆ ಕರಗತವಾದಾಗ ಮಗುವಿನ ಮನಸ್ಸು ಮುಗ್ಧತೆಯು ಅರಿವಾಗುತ್ತದೆ. ಜೊತೆಗೆ ಮಕ್ಕಳಲ್ಲಿ ಯಾವುದೇ ಕಪಟವಿರುವುದಿಲ್ಲ ಎಂದು ಮಗುವಿನ ಮನಸ್ಸಿನ ಮನೋಭಾವನೆಯನ್ನು ಕುರಿತು ಅದ್ಭುತವಾಗಿ ವಿವ-ರಿಸಿದ್ದಾರೆ.

'ಎಂಥ ಭಾಗ್ಯವಂತ ನಾಡಿಗೆಂತ ವಿಧಿಯ ಶೂಲಾ
ಯಾವ ಕೂಗು ಎನಿತು ಕೊರಗು ಎತಣಿಂದ ಜ್ವಾಲಾ
ಜವನ ಕಾಟ ರುದ್ರನೋಟ ಕಣ್ಗೆ ಕ್ರೂರ ಜಾಲಾ'

'ಮಾತೆಯ ಮುತ್ತಿನ ಭಾಗ್ಯವ ಕಳಕೊಂಡ
ತಬ್ಬಲಿ ನಿನಗಾಗಿ ರೋದಿಸುವೆನು'

'ದೌರ್ಭಾಗ್ಯ ಬಂಗಾಲ' ಕವಿತೆಯಲ್ಲಿ ಕವಿಮನವು ಬರಗಾಲದಿಂದ ತತ್ತರಿಸಿದಾಗ ಬಂಗಾಲ ರಾಜ್ಯದ ರುದ್ರ ಭಯಂಕರತೆಯನ್ನು ಚಿತ್ರಿಸಿದ್ದಾರೆ. ಬದುಕು ಅನೇಕ ಸಮಸ್ಯೆಗಳಿಂದ ಕೂಡಿದ್ದು, ಸಂಕೀರ್ಣದ ಜಾಲದಂತಿದೆ. ಜೀವನದಲ್ಲಿ ಖುಷಿ-ಅಳು-ನೋವು ಇವು ನಿರಂತರವಾಗಿ ನಡೆಯುವ ಬದುಕಿನ ಹೋರಾಟ. ಆ ಸಂದರ್ಭದಲ್ಲಿ ಕವಿಯ ಮನಸ್ಸು ನೊಂದುಕೊಳ್ಳುವುದುಂಟು. ಕಲುಷಿತ ವಿಷವು ನಿಮಿಷದಲ್ಲಿ ಆವರಿಸಿಕೊಂಡು ಬಿಡುತ್ತದೆ. ಆ ಸಂದರ್ಭದಲ್ಲಿಯೇ ಇಂಚಲರ ಮೊದಲ ಪತ್ನಿ ಅಗಲಿದಾಗ ಮನನೊಂದು ಮನದಳಲನ್ನು ಕವಿತೆಯಲ್ಲಿ ತೋಡಿಕೊಂಡಿದ್ದು, ಜೊತೆಗೆ ಆ ನೋವನ್ನು ತಮ್ಮ ಕವಿತೆಯಲ್ಲಿ ಭಾರತದ ಸ್ವಾತಂತ್ರ್ಯವನ್ನು

ಅಭಿಮಾನದಿಂದ ರಕ್ಷಿಸಬೇಕೆಂದು ಜನತೆಗೆ ಕರೆ ನೀಡಿ, ಆ ಸಂದರ್ಭದಲ್ಲಿಯ ಭಾರತದ ಶೋಚನೀಯ ಸ್ಥಿತಿಯನ್ನು ಈ ಕವನದಲ್ಲಿ ಬಿಂಬಿಸಿದ್ದಾರೆ.

'ನಿನ್ನೊಲವೆ ನನ್ನ ಹಾಡು
ಬೇರೇನು ಹಾಡಲಿ
ನನ್ನ ವಾಣಿಯೇ ನಿನ್ನ ಪ್ರೇರಣೆ
ಬೇರೆ ಏನು ಬೇಡಲಿ'

'ಮುಡಿಪು' ಎಂಬ ಕವಿತೆಯಲ್ಲಿ ಕವಿ ತಮ್ಮ ಪ್ರಥಮ ಪದ್ಯದಲ್ಲಿ ಹಾಡಿ ಆ ಕಾವ್ಯವನ್ನು ತಾಯಿಗೆ ಅರ್ಪಿಸಿದ್ದಾರೆ. ತಾಯಿಯ ವಾತ್ಸಲ್ಯದ ಸವಿನೆನಹು ಕವಿಯ ಜೀವನದ ಜೀವಾಳವಾಗಿದೆ. ಸ್ಫೂರ್ತಿಯ ಸಲೆಯಾಗಿದೆ. ಕವಿಯ ಭಾವಪೂರ್ಣ ವರ್ಣನೆ, ಸರಳ ಸುಂದರ ಕಲ್ಪನೆ, ಬದುಕಿನ ವಿವಿಧ ರೀತಿಯ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

'ಸೌಂದರ್ಯದಾ ಲೀಲೆ
ಸ್ವರ್ಗದಿಂದಿಳಿಗಿಳಿದು
ಅಂಗಳಕೆ ಮಂಗಳವ ಚಿಮುಕಿಸಿತ್ತು'

'ಸ್ನೇಹಸೌರಭ' ಕವಿತೆಯಲ್ಲಿ ಸ್ನೇಹಕವಿಯಾದ ಪ್ರಕೃತಿಯ ಸೌಂದರ್ಯ ಆರಾಧಕರಾಗಿ ನಾಡು ನುಡಿಯ ಏಳ್ಗೆಗೆ, ವೀರ ಸಂದೇಶ ಬೀರುವ ನಿರ್ಮಲ ಮನಸ್ಸಿನ ನವ್ಯ ಕವಿಗಳಾಗಿ, ನವೋದಯದ ಕವಿಗಳಾಗಿ ಹೊರಹೊಮ್ಮಿದರು. ಕವಿಯ ಕಾವ್ಯಗಳಲ್ಲಿ ಭಾವಗೀತೆಯ ನಾದಮಾಧುರ್ಯ, ಪ್ರಾಸ, ಅನುಪ್ರಾಸ, ಅನುಸ್ವಾರಗಳ ಬಳಕೆ ಹೆಚ್ಚಾಗಿ ಆಗಿರುವುದನ್ನು ಇಲ್ಲಿ ಕಾಣುತ್ತೇವೆ.

'ಸ್ನೇಹವೇ ಸಂಜೀವಿನಿ ಬಾಳಿಗೆ ರಸವಾಹಿನಿ' ಎಂದು ಹಾಡಿದ ಕವಿ ಇಂಚಲರು ಡಿ. ಎಸ್. ಕರ್ಕಿ, ತುರಮುರಿ, ಈಶ್ವರ ಸಣಕಲ್ಲ, ವಿ. ಕೆ. ಕರಡಿ ಇವರೆಲ್ಲ ಸೇರಿ 'ಕಿರಿಯ ಬಳಗ' ಎಂಬ ಹೆಸರಿನಲ್ಲಿ ಗಡಿನಾಡು ಬೆಳಗಾವಿಯಲ್ಲಿ ಕನ್ನಡ ಮಕ್ಕಳ ಸಾಹಿತ್ಯ ಸಂಘವೊಂದನ್ನು ಕಟ್ಟಿ ಅದರ ಸ್ಫೂರ್ತಿಯ ಸೆಲೆಯಾಗಿ ನಿಂತರು. ಅವರ ಸ್ನೇಹಬಳಗ ಸಾಹಿತ್ಯಕ್ಕೆ ಹೆಚ್ಚು ಸ್ಫೂರ್ತಿಯನ್ನು ಒದಗಿಸಿತು.

'ಧರೆಯೊಳಗೆ ಮರೆಯಾಗಿ ಮರದ ಸೌಂದರ್ಯಕ್ಕೆ
ಜೀವರಸವನ್ನೆರೆವ ಬೇರಿನಂತೆ
ಕರುನಾಡ ಸಿಂಗರಿಸಿ, ರಸಗಂಗೆಯಂ ಬರಿಸಿ

ತ್ಯಾಗದಿಂ ಬಾಳಿದಿರಿ ತಾಯಿಯಂತೆ'

'ಗುರು ಬಸವನಾಳರಿಗೆ' ಎಂಬ ಕವಿತೆಯಲ್ಲಿ 1961ರಲ್ಲಿ ಬೆಳಗಾವಿಯಲ್ಲಿ ಕೆ.ಎಲ್.ಇ. ಸಂಸ್ಥೆಯನ್ನು ಸ್ಥಾಪಿಸಿ, ಬೆಳಗಾವಿ ಭಾಗದ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡಿ ಅದು ಇಂದು ಹೆಮ್ಮರವಾಗಿ ಬೆಳೆದು ನಿಲ್ಲಲು ಬಸವನಾಳರು ಸಲ್ಲಿಸಿದ ಸೇವೆ ಅನುಪಮವಾದದ್ದು. ಲಿಂಗರಾಜ ಕಾಲೇಜಿನ ಪ್ರಾಧ್ಯಾಪಕರಾಗಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿ ಜೀವನದ ಕೊನೆಯುಸಿರು ಇರುವವರೆಗೂ ದುಡಿದಿದ್ದನ್ನು ಎಂದಿಗೂ ಮರೆಯುವಂತಿಲ್ಲ. ಕತ್ತಲೆಯ ಬದುಕಿಗೆ ಬೆಳಕಾಗಿ ಬಂದಂತಹ ಬಸವನಾಳರ ಕುರಿತು ಇಂಚಲರ ಅವರ ವ್ಯಕ್ತಿತ್ವದ ಗುಣಗಾನ ಈ ಕವಿತೆಯಲ್ಲಿ ಅಜರಾಮರವಾಗಿ ಉಳಿಯುವಂತೆ ಮಾಡಿದ್ದಾರೆ. ಸಪ್ತರ್ಷಿಗಳ ತ್ಯಾಗದ ಪುಣ್ಯದ ಫಲವಾಗಿ ವಿದ್ಯಾರ್ಥಿಗಳಿಗೆ ಇಂದಿಗೂ ಜ್ಞಾನವನ್ನು ಒದಗಿಸುತ್ತಿರುವುದು ಇವರ ಮಮಕಾರ, ತ್ಯಾಗ, ಸೇವೆಯ ಬಗ್ಗೆ ತಿಳಿಯುವುದೇ ಈ ಕವಿತೆಯು ಒಂದು ಅದ್ಭುತವೇ ಸರಿ.

'ರಸಋಷಿಯೆ ಓ ರಾಷ್ಟ್ರಕವಿ ತಿಲಕ ಕುವೆಂಪು
ನಿಮ್ಮ ಪ್ರತಿಭೆಯ ಪುಣ್ಯ ದೃಷ್ಟಿಯಲ್ಲಿ ರಸವೃಷ್ಟಿ
ಅಭಿನವ ಮಹಾಕವಿ ಕನ್ನಡದ ವಾಲ್ಮೀಕಿ
ರಾಮಾಯಣದ ಬ್ರಹದ್ ಗಾನಮಂ ಪಾಡಿ'

'ರಸಋಷಿ ಕುವೆಂಪು' ಕವಿತೆಯಲ್ಲಿ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಪ್ರಚುರಪಡಿಸಿದ ಕನ್ನಡದ ರಸಋಷಿ ಮೇರುಕವಿ ಕುವೆಂಪುರವರ ಕನ್ನಡ ಸಾಹಿತ್ಯಸೇವೆ ಅಮೋಘವಾದುದು. ಶ್ರೀ ಕುವೆಂಪುರವರ ವಿಶಿಷ್ಟ ಗುಣಗಳ ಬಗೆಗೆ ಬೆಳಕು ಚಲ್ಲುವ ಇಂಚಲರ ಕವಿತೆ... 'ಕನ್ನಡದ ಸರಸ್ವತಿಯ ಸವಿಗಣ್ಣು ಕುವೆಂಪು' ಎಂಬ ಕವಿತೆಯ ಸಾಲುಗಳನ್ನು ಇಂಚಲರು ಆರಂಭಿಸುತ್ತಾರೆ. ಕುವೆಂಪು ಅವರ ಮಾರ್ಗದರ್ಶನದ ಮೂಲಕ ಪ್ರೇರಣೆ ಪಡೆದು ಸಾಹಿತ್ಯಕ್ಕೆ ಹೊಸ ಮೈಲುಗಲ್ಲು ಹಾಕಿದ ಇಂಚಲರು ಅವರ ಪ್ರೀತಿ, ಗೌರವ, ವಿಶ್ವಾಸವನ್ನು ಇಲ್ಲಿ ಚಿತ್ರಿಸಿದ್ದಾರೆ. ನಿಸರ್ಗದ ಸೌಂದರ್ಯವನ್ನು ಗೌರವಿಸುವ ಕುವೆಂಪುವಿನ ಬದುಕಿನ ಚಿತ್ರಣ ಇಲ್ಲಿ ನೀಡುತ್ತಾರೆ.

'ಗಳಿಗೆಯಾ ಬಾಳಿಂಗೆ ಎಂಥ ಕಳಗವಂತೆ
ನಾಳಿಗೆನ್ನುವ ಚಿಂತೆ ಬರಿ ಕಳ್ಳಸಂತೆ
ರಾಜಕೀಯ ಸೂತ್ರ ಸ್ವಾರ್ಥದಾಹ ಕುತಂತ್ರ

ಸ್ವಜನ ವಿದ್ರೋಹವೇ ಸ್ವರ್ಗವೆನಿಸಿಹುದು'

'ಭಾವಶ್ರೀ' ಕವನ ಸಂಕಲನದಲ್ಲಿರುವ 'ಎಂಥ ಬಾಳಿದು ಇಂದು' ಎಂಬ ಕವಿತೆಯಲ್ಲಿ ಇಂಚಲರು ಸ್ವಾತಂತ್ರ್ಯ ದೊರೆತ ಮೇಲೆ ಒಂದೆರಡು ದಶಕಗಳು ಕಳೆದಾಗಿನ ಸಾಮಾಜಿಕ ಸ್ಥಿತಿಗತಿಗಳನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಸುಂದರವಾದ ಸಮಾಜ, ಮುಕ್ತ ಸಮಾಜ, ಕಲ್ಯಾಣ ರಾಜ್ಯಕ್ಕಾಗಿ ನಮ್ಮ ಪುಣ್ಯ ಪುರುಷರು ತಮ್ಮ ತನು–ಮನ–ಧನಗಳ ಬಲಿದಾನಗೈದರು. ಆ ಹೆಮ್ಮೆ ಅಭಿಮಾನ ನಮ್ಮ ಕವಿಗಿದೆ. ಅದನ್ನೆಲ್ಲಾ ಕಣ್ಣಾರೆ ಕಂಡು, ಕೇಳಿದ ಕವಿಗೆ ಸ್ವಾತಂತ್ರ್ಯಾನಂತರದಲ್ಲಿ ಸ್ವಾರ್ಥ, ಮೋಸ, ದ್ರೋಹ, ಅಪಾರ ಆಸ್ತಿಪಾಸ್ತಿ ಸಂಗ್ರಹಣೆ, ಮೇಲು–ಕೀಳು ಎಂಬ ಭೇಧ–ಭಾವ, ಶೋಷಣೆ ಮಾಡುವ ಶ್ರೀಮಂತ ವರ್ಗ ಇವೆಲ್ಲವೂ ಅಪಾರವಾದ ನೋವನ್ನು ತಂದಿದೆ. ಅದು ಅವರ ಮನದಾಳದಲ್ಲಿ 'ಎಂಥ ಬಾಳಿದು ಇಂದು' ಎಂದು ಉದ್ಗಾರ ತೆಗೆಯುವಂತಾಗಿದೆ ಈ ಕವನದ ಸಾಲುಗಳು.

'ಕನ್ನಡ ನಾಡಿನ ಹೊನ್ನಿನ ಹಬ್ಬವು
ಇನ್ನಿದು ಸಾಗಿದೆ ನೋಡಣ್ಣ
ಬಂಗಾರದ ರಥ ಸಿಂಗಾರಾಗುತ
ರಭಸದಿ ಬರುತಿದೆ ಬಾರಣ್ಣಾ'

'ಕನ್ನಡ ದೇವಿಯ ತೇರು' ಎಂಬ ಕಾವ್ಯದಲ್ಲಿ ಇಂಚಲರ ನಾಡಕವಿತೆಗಳು ಸ್ಫೂರ್ತಿಯ ಚಿಲುಮೆಯಾಗಿವೆ. 'ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ' ಎನ್ನುತ್ತಾ ಕನ್ನಡವನ್ನು ಉಂಡು–ಉಸಿರಾಡಿದವರು. ಕನ್ನಡದ ಗತಕಾಲದ ಇತಿಹಾಸವನ್ನು, ಸಾಹಿತ್ಯ, ಸೊಗಡು, ಶ್ರೇಷ್ಠತೆಯನ್ನು ಪ್ರತಿಸಾಲಿನಲ್ಲಿ ಮೊಳಗಿಸುತ್ತಾ ಸಿರಿಗನ್ನಡ ಸಂಭ್ರಮದ ಜಾತ್ರೆಯನ್ನು ವರ್ಣಿಸಿ ಧನ್ಯತೆಯನ್ನು ಪಡೆದ ಕವಿ ಇಂಚಲರು.

ಬೆಳಗಾವಿಯ ಭಾಷೆಯ ಸೊಗಡು ಇಲ್ಲಿ 'ಅಣ್ಣಾ' ಎಂಬ ಪ್ರಸಾಕ್ಷರದಲ್ಲಿ ಬಂದಾಗ ಆತ್ಮೀಯ ಕರೆಯಾಗಿ ಮಾರ್ಪಟ್ಟಿದೆ. ಕವಿಗೆ ಇದು ಬರೀ ಹಬ್ಬವಾಗಿಲ್ಲ. ಬದಲಾಗಿ ಹೊನ್ನಿಸಿ ಹಬ್ಬವಾಗಿದೆ. ಆ ತಾಯಿ ಭುವನೇಶ್ವರಿಯ ಭಾವಚಿತ್ರ ಇರಿಸಿದ ರಥವು ಬಂಗಾರಮಯವಾಗಿ ಕವಿಗೆ ಕಾಣುತ್ತದೆ. ಆದ್ದರಿಂದ ಈ ಸಾಲುಗಳು ರಸಚೇತನದಿಂದ ಕೂಡಿದ್ದು, ಸ್ಫೂರ್ತಿಗೆ ಇನ್ನೊಂದು ನೆಲೆಯಾಗಿ ನಿಂತಿದೆ.

ಇಂಚಲರ 'ಭಾವಶ್ರೀ' ಕವನಸಂಕಲನದಲ್ಲಿ 'ಎಚ್ಚೆತ್ತ ಕರ್ನಾಟಕ ಕರ್ತವ್ಯದ ಕರೆ ಮತ್ತು ನಮ್ಮ ಬಾವುಟ' ಎಂಬ ನಾಡಿನ ಕುರಿತಾದ ಕವಿತೆಗಳಿವೆ. 'ನಮ್ಮ ಬಾವುಟ' ಪದ್ಯದ ತುಂಬ ಕವಿ ಕಾಯಕದಿ ನೆಮ್ಮದಿಯ ಜೀವನ ಸಾಗಿಸಲು,

ಒಗ್ಗಟ್ಟಾಗಿ ಪ್ರಗತಿಯ ಹೆಜ್ಜೆಯನ್ನು ಹಾಕಲು ಮಾನವೀಯತೆಯನ್ನು ಮರೆಯುವಲ್ಲಿ ಹಂಬಲಿಸುತ್ತಿದ್ದಾರೆ ಎಂದು ಹೇಳಲಾಗುತ್ತದೆ.

**ಸಮಾರೋಪ:**

ಇಂಚಲರು ತಪಸ್ಸಿನಿಂದ ಕಾವ್ಯಕೃಷಿ ಮಾಡಿದವರು. ಬೆಳಗಾವಿಯಲ್ಲಿ ಭಾಷಾ ಗಲಭೆಗಳು ಉಂಟಾದಾಗ ಕನ್ನಡ ಉಳಿಸಲು ಅವರು ನವೋದಯ ಸಾಲಿನ ಕವಿಯಾಗಿ ಕವಿಗರ್ಜನೆ ಮಾಡಿದವರು. ಬೆಳಗಾವಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಚಟುವಟಿಕೆಗಳನ್ನು ನಡೆಸುತ್ತಾ, ಸಂಪೂರ್ಣವಾಗಿ ಮರಾಠಿಮಯವಾದ ನೆಲವನ್ನು ಕನ್ನಡಮಯಗೊಳಿಸಲು ಹಗಲಿರುಳು ಶ್ರಮಿಸಿದವರು. ಹಲವಾರು ಸಾಹಿತಿಗಳಿಗೆ, ಕವಿಗಳಿಗೆ ಜಿ.ಎ. ಹೈಸ್ಕೂಲ್ ಕನ್ನಡಿಗರ ಶಕ್ತಿಕೇಂದ್ರವಾಗಿ ರೂಪ ಪಡೆಯಲು ಇವರ ಸೇವೆ ಅಪಾರವಾದದ್ದು. 'ತನುಮನವೆಲ್ಲವೂ ಕನ್ನಡಮಯವಾಗಿದ್ದರೂ ಇವರು ಅನ್ಯಭಾಷಾ ದ್ವೇಷಿಗಳಾಗಿರಲಿಲ್ಲ, ಭಾಷಾಪ್ರೇಮ ದೇಶಪ್ರೇಮಕ್ಕೆ ಅಡ್ಡಿಯಾಗಬಾರದೆಂಬ ಮನೋಭಾವನೆಯನ್ನು' ಹೊಂದಿದ್ದರು ಎಂದು ಒಂದೆಡೆ ಪ್ರೊ. ಜಿ. ಜಿ. ನೇಗಿನಹಾಳರ ನುಡಿಚಿತ್ರದಲ್ಲಿ ಹೇಳಿದ್ದು ನೆನಪಾಗುತ್ತದೆ. ಇಂಚಲರ ಎಲ್ಲ ಕಾವ್ಯಗಳು ನಾಡು–ನುಡಿಗಾಗಿ, ಸ್ವಾತಂತ್ರ್ಯ ಹೋರಾಟಕ್ಕಾಗಿ, ದಾನ–ಧರ್ಮ ಮಾಡಿದ ಮಹನೀಯರ ಸೇವಾ ಮನೋಭಾವನೆಯನ್ನು ಸ್ಮರಿಸುವಲ್ಲಿ ಹಾಗೂ ಆ ಜೀವನದ ನಡೆ–ನುಡಿಗಳನ್ನು ತಮ್ಮ ರೂಪಕ ಶಕ್ತಿಯ ಶಬ್ದಗಳಲ್ಲಿ ಹಿಡಿದಿಡುವಲ್ಲಿ ಸಾರ್ಥಕತೆಯನ್ನು ಪಡೆದುಕೊಂಡಿದೆ. ಹೀಗೆ ಇವರ ಕಾವ್ಯಗಳು ಹೃದಯದ ಅಂತರಾಳದಿಂದ ಸಹಜವಾಗಿ ಪುಟಿದೆದ್ದ ರಸಕಾವ್ಯಗಳಾಗಿವೆ. ಎಲ್ಲರಲ್ಲಿಯೂ ಕನ್ನಡಭಿಮಾನವನ್ನು ತುಂಬುತ್ತಾ, ನಾಡಿನ ಏಳ್ಗೆಗೆ ಹಂಬಲಿಸಿದ ಕವಿಯ ನಾಡಪ್ರೇಮ ಇಲ್ಲಿ ತುಂಬು ಹೊಳೆಯಾಗಿ ಹರಿದಿದೆ. ಪ್ರಾತಃಸ್ಮರಣೀಯರೆಂದು ಕರೆಯುವ ಶ್ರೀ. ಎಸ್. ಡಿ. ಇಂಚಲರ ಸಾಹಿತ್ಯ ಕೃಷಿ, ಕನ್ನಡಸೇವೆ, ಇಂದಿಗೂ ಬೆಳಗಾವಿ ಭಾಗದ ಜನರಿಗೆ ಅಖಂಡ ಕರ್ನಾಟಕದ ಹೊಂಗನಸನ್ನು ಕಾಣುವ ಸಕಲರಿಗೂ ಸದಾ ಸ್ಫೂರ್ತಿಯ ಚಿಲುಮೆಯಾದರು... ಆದರ್ಶಮಯವಾದರು...

**ಆಧಾರ ಗ್ರಂಥಗಳು:**

1. ಕನ್ನಡದ ಪೋಷಕರು – ಡಾ ಜಿ.ಡಿ.ಜೋಶಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
2. ಕವಿ ಎಸ್. ಡಿ. ಇಂಚಲರ ಕನ್ನಡ ಸೇವೆ – ಒಂದು ಅಧ್ಯಯನ – ಆನಂದಕುಮಾರ ಬ ಪಾಟೀಲ, ಕನ್ನಡ ವಿಶ್ವವಿದ್ಯಾಲಯ ಹಂಪಿ–2013
3. 'ಇಂಚರ' – ಎಸ್. ಡಿ. ಇಂಚಲರ ಸಮಗ್ರ ಕಾವ್ಯ– ಪ್ರೊ.ಬಿ.ಎಸ್. ಗವಿಮಠರು, ಸಂಪಾದನೆ ಕನ್ನಡ ಜಾಗೃತಿ ಪುಸ್ತಕ ಮಾಲೆ
4. ಬೆಳಗಾವಿ ಬೆಳಕು – ಸಂಸ್ಮರಣ ಸಂಪುಟ–ಅಖಿಲ ಭಾರತ 70ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ 2003 ಸಂಪಾದಕರು– ಡಾ ಎಸ್.ಆರ್. ಗುಂಜಾಳ